ಒಂದು ರೀತಿಯ ಭಯ ಎನ್ನುವ ಹಾಗಾಗಿದೆ. ಅಂದಿನಿಂದ ಕಣ್ಣುಬಿಟ್ಟ ಒಂದೊಂದು ರೇಷ್ಮೆ ಹುಳುವಿನೊಂದಿಗೂ ಶ್ರೀನಿವಾಸ ತನ್ನ ಬಾಂಧವ್ಯ ಮೂಡುವ ಹಾಗೆ ದುಡಿಯುತ್ತಿದ್ದ. 'ಮೂರನೇ ಮಂಕರಿಯಲ್ಲಿ ಮೂವತ್ನಾಲ್ಕು ಹುಳುಗಳಿದ್ದಾವೆ. ಇಂದು ಎರಡು ಕಮ್ಮಿ ಇದೆಯಲ್ಲಾ? ಇಲಿ ಬಂತಾ? ಊಜಿ ನೊಣಗಳು ಬರಲಿಲ್ಲ ತಾನೇ? ಅಲ್ಲಿ ನಾಳೆ ಪ್ಯಾರಫೀನ್ ಪೇಪರ್ ಬದಲಾಯಿಸಬೇಕು. ಹಿಪ್ಪುನೇರಳೆ ಎಲೆಬುಟ್ಟಿಯಲ್ಲಿ ಸ್ಪ್ರೇ ಮಾಡಬೇಕು.'

ರೇಷ್ಮೆ ಹುಳುಗಳ ಅಸಹಜ ಮಿಸುಕಾಟದಿಂದಲೇ ಗಾಳಿ–ಬೆಳಕು ಸರಿಹೋಗದಾಯಿತೆಂಬ ಸಂದೇಶ ಅವನ ಆತ್ಮವನ್ನು ತಲುಪುತ್ತಿತ್ತು. ರೇಷ್ಮೆ ಸೊಪ್ಪನ್ನು ಅವುಗಳ ಮೇಲೆ ಹಾಕಿದ ಸ್ವಲ್ಪ ಹೊತ್ತಿನ ನಂತರ ಅವುಗಳು ಸೊಪ್ಪನ್ನು ಕಬಳಿಸುತ್ತಿದ್ದ ರಭಸವು ಇಡೀ ಜೀವಜಾಲದ ಹಸಿವಿನ ರೂಪಕದಂತೆ ಕಾಣುತ್ತಿತ್ತು. ಯಾವುದೋ ಮೂಕ ಸಂಕಟಕ್ಕೆ ಉಪಶಮನ ನೀಡಲು ಬದುಕು ತನಗೆ ಅವಕಾಶ ಕೊಟ್ಟಿತು ಎಂಬಂತೆ, ಶ್ರೀನಿವಾಸ ಧನ್ಯಭಂಗಿಯೊಂದರಲ್ಲಿ ಅವುಗಳ ಆಹಾರ ಸೇವನೆಯನ್ನು ನೋಡುತ್ತಾ ನಿಲ್ಲುತ್ತಿದ್ದ. ಕಡೆಗೊಂದು ದಿನ ಅವುಗಳ ತಲೆಯ ಭಾಗಗಳು ಕಪ್ಪಾಗುತ್ತಿದ್ದವು. ಹಾಗೆ ಜ್ವರ ಬಂದ ಹುಳುಗಳು ಇದ್ದಕ್ಕಿದ್ದಂತೆ ಊಟವನ್ನು ಸಂಪೂರ್ಣ ನಿಲ್ಲಿಸಿಬಿಡುತ್ತಿದ್ದವು. ಶ್ರೀನಿವಾಸ, ಪ್ರತಿದಿನ ಹುಳುಗಳಿದ್ದ ಮಂಕರಿಗಳನ್ನು ಕ್ಲೀನು ಮಾಡಿ, ಪೇಪರ್ ಬದಲಾಯಿಸಿ, ತೇವಾಂಶ ಇಲ್ಲದಂತೆ ಅಚ್ಚುಕಟ್ಟಾಗಿ ಕಾಯುತ್ತಿದ್ದ. ಅಚಾನಕ್ಕಾಗಿ ಎಂದೋ ಒಂದು ದಿನ ರೇಷ್ಮೆ ಹುಳುಗಳು ಪೂರ್ಣ ಬೆತ್ತಲಾದಂತೆ ಕಂಡು, ತೆಳು ಹಳದಿ ಬಣ್ಣದಲ್ಲಿ ರೇಷ್ಮೆ ಎಳೆ ಸ್ರವಿಸಲು ಶುರು ಮಾಡುತ್ತಿದ್ದವು. ಒಡಲ ನೂಲು ತಮ್ಮನ್ನೇ ಆವರಿಸಿಕೊಂಡು ಹುಳುಗಳನ್ನು ಹೊರಜಗತ್ತಿನಿಂದ ಮರೆಮಾಡುತ್ತಿದ್ದ ಹಾಗೆಯೇ, ಶ್ರೀನಿವಾಸ ಕಡೆಯ ಬಾರಿಗೊಮ್ಮೆ ಅವುಗಳನ್ನು ಮುಟ್ಟಬೇಕೆಂದು ಚಡಪಡಿಸುತ್ತಿದ್ದ. ಅಂತರ್ಗತವಾದಾಗಲೇ ನಮ್ಮಿಂದ ಮೌಲ್ಯಯುತವಾದ್ದು ಘಟಿಸುತ್ತದೆ. ಅಲ್ಲಿ ಋಣದ ಹಂಗಿಲ್ಲವೆನ್ನುವ ಹಾಗೆ ಗೂಡಿನ ಒಳಗೆ ಸೇರುವ ರೇಷ್ಮೆಹುಳುಗಳು ಒಂದು ನಿರ್ದಿಷ್ಟ ಗತಿಯಲ್ಲಿ ತಮ್ಮ ಸುತ್ತಲೂ ಗೂಡು ಕಟ್ಟಿಕೊಂಡುಬಿಡುತ್ತಿದ್ದವು.

ಒಂದು ದಿನ ಇದ್ದಕ್ಕಿದ್ದ ಹಾಗೆ ರೇಷ್ಮೆ ಗೂಡುಗಳು ಕಾಣೆಯಾಗುತ್ತಿದ್ದವು. ರಾಮಣ್ಣ, ಪಟ್ಟಣಕ್ಕೆ ಹೋಗಿ ಅವೆಲ್ಲವನ್ನೂ ಮಾರಿದ ಎಂದು ಅಮ್ಮ ಹೇಳುತ್ತಿದ್ದಳು. ಹೇಳಲು ಬಾರದ ಸಂಕಟದ ನಡುವೆಯೇ ಶ್ರೀನಿವಾಸ ಮುಂದಿನ ಬೆಳೆಯ ಬಾಂಧವ್ಯಕ್ಕೆ ಕಾಯುತ್ತಿದ್ದ.

5

ಮೂರು ತಿಂಗಳಾಯಿತು. ಚಂದ್ರಹಾಸನ ಟ್ರೇನಿಂಗ್ ಪರಿಣಾಮ ಚಿಕ್ಕಮಗಳೂರಿನ ಯಾವ ಪ್ರೇಕ್ಷಣೀಯ ಸ್ಥಳದ ಕುರಿತಂತೆಯೂ ಶ್ರೀನಿವಾಸ ತಿಳಿದಿದ್ದ. ಅವನಂತೂ ಕಬ್ಬಿನಳ್ಳಿ ಪೋಸ್ಟ್ ಆಫೀಸ್ ಹತ್ತಿರವೂ ಹೋಗಿಲ್ಲ. ಹೋಮ್‌ಸ್ಟೇಗೆ ಬಂದ ಪ್ರವಾಸಿಗರಿಗೆ 'ಹಿರೇಕೊಳಲೆ ಲೇಕ್ ಹತ್ತಿರ ಹೋಗಿ ಬನ್ನಿ ಸಾರ್. ಯಗಚಿ ಡ್ಯಾಮ್ ಬರೋಕೆ



ಮುಂಚೆ ಇಲ್ಲಿಂದಲೇ ಇಡೀ ಚಿಕ್ಕಮಗಳೂರಿಗೆ ನೀರು ಸಿಗುತ್ತಿದ್ದದ್ದು. ಮುಳ್ಳಯ್ಯನಗಿರಿ ಮೇಲೆ ಮುಳ್ಳಯ್ಯ ತಪಸ್ಸು ಮಾಡ್ತಿದ್ದನಂತೆ, ಅಷ್ಟು ಮೇಲೆ ಒಬ್ಬನೇ ಹೇಗಿರುತ್ತಿದ್ದ ಅಂತ ನಿಮಗೆ ಅನಿಸದೇ ಹೋದರೆ ಕೇಳಿ' ಎನ್ನುತ್ತಿದ್ದಾಗ ಅವನ ಕಣ್ಣುಗಳೂ ಮಿನುಗುತ್ತಿದ್ದವು. 'ದತ್ತಪಾದುಕೆ ಪಕ್ಕದಲ್ಲಿ ಬುಡನ್ಬಾಬಾ ದರ್ಗಾ ಮಾತ್ರ ಇಲ್ಲ ಸಾರ್. ಇನ್ನೂ ಐದಾರು ದರ್ಗಾಗಳಿವೆ. ಅವೆಲ್ಲವೂ ಬಾಬಾ ಶಿಷ್ಯಂದಿರದ್ದೇ. ಒಂದರ ಮೇಲಂತೂ ರೂಪಾಯಿ ಕಾಯಿನ್ ಮೆತ್ತಿದರೆ ನೀವು ಅಂದುಕೊಂಡದ್ದು ಆಗತ್ತೆ. ದರ್ಗಾಗೆ ಹಿಂದೂಗಳೂ ಹರಕೆ ಹೊತ್ಕೋತಾರೆ. ನೋಡಿ ಬನ್ನಿ ಸಾರ್" ಅನ್ನುತ್ತಿದ್ದ. 'ಮಾಣಿಕ್ಯಧಾರಾ ಹತ್ತಿರ ಸಾಬರು ಚುರುಮುರಿ ಮಾಡ್ತಾರೆ, ಅದನ್ನು ತಿನ್ನಬೇಕು ಸಾರ್ ನೀವು' ಅಂತಿದ್ದ. 'ಗಿರಿ ರಸ್ತೇಲಿ ಸಿರಿಕಾಫಿ ಚೆನ್ನಾಗಿರತ್ತೆ ಕೇಳಿ ಸಾರ್. ಅರಮನೆ ಹೋಟೆಲಿಗೆ ಹೋಗಿ, ಬರ್ತಾ ಸಂಜೆ ಚಾಟ್ಸ್ ತಿನ್ನಿ. ಬೇಲೂರು ರಸ್ತೇಲಿರೋ ಮಯೂರ ಹೋಟೆಲಿನಲ್ಲಿ ದೋಸೆ ಚೆನ್ನಾಗಿರತ್ತೆ'. ಹಾಗೆ ಹೇಳುವಾಗ ನಾನೂ ನಿಮ್ಮ ಜೊತೆ ಬರಲಾ ಸಾರ್ ಎನ್ನುವ ಪ್ರಶ್ನೆಯೊಂದಿಗೆ ಅವನ ಎದೆ ಮಿಡಿಯುತ್ತಿತ್ತು.

ಅವನು ಮುಂಬಾಗಿಲಿಗೆ ಸೇರಿದವನೇ ಅಲ್ಲ. ಎಲ್ಲ ಸ್ವೀಕಾರಗಳ, ಎಲ್ಲ ಸಂಕೋಚಗಳ ಆತ್ಮೀಯ ವೇದಿಕೆಯಾದ ಹಿಂಬಾಗಿಲ ಬಾವ ಅವನು. ಹಿಂಬಾಗಿಲೆನ್ನುವುದೇ ಪ್ರದರ್ಶನಕ್ಕೆ ಆಸ್ಪದವಿಲ್ಲದ ಒಂದು ಅಪ್ಪಟ ಭಾವ ಪರಿಸರ, ಒಂದು ವಿನೀತ ಮಿಡಿತ, ಒಂದು ಬೆಚ್ಚನೆಯ ಕಾಲುದಾರಿ. ಶೇಷಾಚಲ ತೋಟದಲ್ಲಿ ಇನ್ನೆರಡು ರೂಮು ಹಾಕಿಸುವ ಕೆಲಸ ಆರಂಭ ಮಾಡಿದ ಕೂಡಲೇ ಮೈಮೇಲೆ ಬಂದವನಂತೆ, 'ಬಾವಾ, ಹಿತ್ತಲು ಕಡೆಗೂ ಬಾಗಿಲಿಡಿ' ಅಂದಿದ್ದ. 'ಕಷ್ಟ ಕಣಯ್ಯಾ. ಹಾವು ಬಂದರೆ ಸಮಸ್ಯೆ ಆಗತ್ತೆ' ಅಂತ ಶೇಷಾಚಲ ಅಂದಾಗ ಅವನು ನಿರಾಶನಾಗಿದ್ದಂತೂ ಸ್ಪಷ್ಟ. ಏನನಿಸಿತೋ, ಶೇಷಾಚಲ ಹಿತ್ತಲಿಗೊಂದು ಬಾಗಿಲಿಟ್ಟು ಅಲ್ಲಿಂದ ಕಾಲುದಾರಿಯೊಂದನ್ನು ಕೂಡಾ ನಿರ್ಮಿಸಿದ. ಅನತಿ ದೂರದಲ್ಲಿ ಬಾವಿ ತೆರೆದು ಗಾಲಿ ಹಾಕಿದ. ಒಂದು ನೇರಳೆ ಗಿಡನೆಟ್ಟು, ಶ್ರೀನಿವಾಸನಿಗೆ 'ಚೆನ್ನಾಗಿ ನೋಡಿಕೋ' ಅಂದ.

6

ಶ್ರೀನಿವಾಸನೆಂದೂ ಜೀವನದಲ್ಲಿ ಕೇಳದ ಪದ ಮೊದಲ ಬಾರಿ ಕೇಳಿದ. ಲಾಕ್ಡೌನು. ಜನ ಸಾಯ್ತಾರಂತೆ. ಮೂತಿಗೆ ಮಾಸ್ಕ್ ಹಾಕೋಬೇಕು. ಕೈ ತೊಳೀಬೇಕು. ಜನ ಭಯಭೀತರಾದರು. ಮನೆಗಳಿಂದಲೇ ಹೊರಬಾರದವರು ಬೆಂಗಳೂರಿನಿಂದ ಕಬ್ಬಿನಳ್ಳಿಗೆ ಬರ್ತಾರೆಯೇ? ರಾಯಲ್ ಹೋಮ್‌ಸ್ಟೇಗೆ ಜನ ಬರುವುದು ಕಡೆಗೂ ನಿಂತೇ ಹೋಯಿತು. ಎರಡು ತಿಂಗಳಾದರೂ ಒಂದು ನರಪಿಳ್ಳೆ ಹೋಮ್‌ಸ್ಟೇ ಕಡೆಗೆ ತಲೆ ಹಾಕಲಿಲ್ಲ. ಸತೀಶನ ಸಂಬಳ ನಿಂತುಹೋಯಿತು. ಬೆಳ್ತಂಗಡಿಗೆ ವಾಪಸ್ಸು ಹೋಗಿ ಅಲ್ಲೇ ಏನಾದ್ರೂ ಮಾಡಿಕೊಂಡು ಬದುಕುವ ಅಂತ ಅವನು ಹೊರಡಲು ಸಿದ್ಧನಾದ. ಕೆಲಸಗಾರರು ಬರುವುದನ್ನು ಕಡಿಮೆ ಮಾಡಿದ್ದರು. ಶೇಷಾಚಲ ಹತಾಶನಾದ.

ಕಡೆಗೆ ಶ್ರೀನಿವಾಸನಿಗೆ ಚಿಕ್ಕಮಗಳೂರಿನಿಂದಲೂ ಬಿಡುಗಡೆಯ ಭಾಗ್ಯ ನೀಡುವ ಪ್ರಯತ್ನ ಆರಂಭವಾಯಿತು. ರಾಮಣ್ಣ ಅವನನ್ನು ಸಾಕಲು ತನಗೆ ಸಾಧ್ಯವಾಗದು ಅಂದ. ಶೇಷಾಚಲ ಶ್ರೀನಿವಾಸನೊಂದಿಗೆ ಮಾತೇ ಬಿಟ್ಟ. ಚಂದ್ರಹಾಸನೂ ಸಪತ್ನೀಕನಾಗಿ ಚಿಕ್ಕಮಗಳೂರಿನ ಮನೆಯಲ್ಲಿಯೇ ಬಂದು ವರ್ಕ್ ಫ್ರಂ ಹೋಂ ಆರಂಭಿಸಿದಾಗಿನಿಂದ ಮನೆಯ ವಾತಾವರಣ ಇನ್ನಷ್ಟು ಉದ್ವಿಗ್ನಗೊಂಡಿತು. ಸುಮಿತ್ರಕ್ಕನಿಗೆ ಜ್ವರ ಅಟಕಾಯಿಸಿಕೊಂಡಿತು. ನಾಲಿಗೆ ರುಚಿಯೇ ಇಲ್ಲ ಅಂದ ಒಂದು ದಿನ ಶೇಷಾಚಲ ಎಲ್ಲೋ ಕರೆದುಕೊಂಡು ಹೋಗಿ, ಅವಳನ್ನು ಬಿಟ್ಟು ಒಬ್ಬನೇ ಬಂದ. ಭಯಭೀತನಾಗಿದ್ದಂತಿತ್ತು. ಮೊದಲೇ ಅವಳಿಗೆ ಶುಗರು, ಬಿಪಿಗಳಿತ್ತು. ಹದಿನಾಲ್ಕು ದಿನಗಳ ಕ್ವಾರಂಟೀನ್‌ನಲ್ಲಿ ಸುಮಿತ್ರಕ್ಕನಿಗೆ ಏನಾಯಿತು ಎನ್ನುವುದು ತಿಳಿಯಲೇ ಇಲ್ಲ. ಅವಳು ಮನೆಗೂ ಹಿಂದಿರುಗಲಿಲ್ಲ. ವಿಧಿವಿಧಾನದ ಅಪರ ಕ್ರಿಯೆಗಳನ್ನೂ ಕಾಣಲಿಲ್ಲ.

7

ಶ್ರೀನಿವಾಸ ಆ ಇಳಿ ಮಧ್ಯಾಹ್ನ ಚಿಕ್ಕಮಗಳೂರಿನ ಬಸ್ ಸ್ಟ್ಯಾಂಡಿನಲ್ಲಿ ನಿಂತಿದ್ದ. ಇಡೀ ಚಿಕ್ಕಮಗಳೂರು ಮೌನ ಅನಾದರವನ್ನು ಹೊದ್ದ ಒಂದು ಅಪರಾಹ್ನದ ಹಿತ್ತಲಿನ ಹಾಗೆ ಕಾಣುತ್ತಿತ್ತು. ಎರಡು ದಿನದಿಂದಲೂ ಬೀಳುತ್ತಿದ್ದ ಮಳೆ ಸದ್ಯ ನಿಲ್ಲುವ ಹಾಗೆ ಕಾಣದೇ ಯಾವುದೋ ಒಂದು ವಿಮೋಚನೆಯನ್ನು ರುಜುವಾತು ಮಾಡುತ್ತಿದ್ದಂತೆ ಇತ್ತು. ಅಲ್ಲಿಯೇ, ಮಾಸ್ಕ್ ಧರಿಸಿ ತಮ್ಮ ಬ್ಯಾಗುಗಳೊಂದಿಗೆ ನಿಂತಿದ್ದ ನಾಲ್ಕು ಜನರು ಒಂದು ವಿಶಾಲ ನಿರೀಕ್ಷೆಯನ್ನು ಪ್ರತಿನಿಧಿಸುತ್ತಿದ್ದರು. ಉತ್ತರದ ಗಿರಿಯ ರಸ್ತೆ, ದಕ್ಷಿಣದ ಬೇಲೂರ ರಸ್ತೆಯ ತಿರುವುಗಳು ಅನುಬಂಧವೊಂದರ ಸಂಪರ್ಕ ಬಿಂದುಗಳಾಗಿ ನಿಂತಿದ್ದವು. ಚಿಕ್ಕುರುಗೋಡು ಹಾಗೂ ಚಿಕ್ಕಮಗಳೂರು ಎರಡೂ ಒಂದೇ ಅನಿಸುವ ಹಾಗಿತ್ತು ಶ್ರೀನಿವಾಸ ಆ ಕುಂಭದ್ರೋಣ ಮಳೆಯನ್ನು ನೋಡುತ್ತಾ ನಿಂತ ಅಚಲ ದೃಶ್ಯ.

ಪ್ರತಿಕ್ರಿಯಿಸಿ: **feedback@sudha.co.in**